ಸಂಗವ್ವಕ್ಕ ಐವತ್ತು ರೂಪಾಯಿ ಕೂಡಿಸಿಟ್ಟು ಮಣಿಗಾರನಲ್ಲಿ ಒಂದು ಜೊತಿ ಶಾಪೂರ ಹೂವು ಕೊಂಡುಕೊಂಡು ಹತ್ತತ್ತು ರೂಪಾಯಿಯಂತೆ ಐದು ವಾರಕ್ಕೆ ಲೆಕ್ಕ ಚುಕ್ತಾ ಮಾಡಿದ್ದಳು. ಈಗ ಮನೆಯಲ್ಲಿದ್ದ ಒಂದು ತಾಮ್ರದ ಹಂಡೆ ಮತ್ತು ಕೊಡವನ್ನೂ ಕಾರಕೂನ ಸಿಬಸಪ್ಪನ ಮನೆಯಲ್ಲಿ ಐದುನೂರು ರೂಪಾಯಿಗೆ ಒತ್ತೆಗೆ ಇಟ್ಟದ್ದಾಗಿತ್ತು. ಇಂತಹದರಲ್ಲಿ ವಯಸ್ಸಿಗೆ ಬಂದ ಮಗಳ ಮದುವೆ ಮಾಡಬೇಕೆಂದು ಸಂಗವ್ವಕ್ಕ ದಿನಾಲೂ ಅವನ ಕಿವಿಯೊಳಗೆ ಒದರುತ್ತಿದ್ದದ್ದಕ್ಕೆ ಈ ದಲಾಲ ತಂದ ಗುಜ್ಜರ ವರನ ಸುದ್ದಿ ದೇವರು ಕೊಟ್ಟ ವರವೇ ಎಂದು ಭಾವಿಸಿಕೊಂಡ ಉಮೇದಿಯಲ್ಲೇ ಇವತ್ತು ಒಂದು ಪಾಕೀಟು ಹೆಚ್ಚೇ ಇಳಿಸಿದ್ದ.

* * *

ಮುಖದ ಮೇಲೆ ಬಿಸಿಲು ಚುರುಗುಟ್ಟುವ ಕಡತಕ್ಕೆ ಎದ್ದು ಕಣ್ಣುಜ್ಜಿಕೊಂಡು ಮನೆಯೊಳಗೆ ಹೊಕ್ಕ ಸಂಗಪ್ಪ, ‘ಏ ಬೋಸಡೆ ಶಾಂತಿನ್ನ ತಯಾರ ಮಾಡು, ಸೀರಿ ಉಡಸು, ಮದ್ದಿನಮ್ಯಾಲ ನೋಡಾಕ ಬರಾವ್ರ ಅದಾರ; ನನಗೀಗ ಊಟಕ್ಕ ನೀಡಿಕೊಡು’ ಅಂದ ಒಳ್ಳೆ ದರ್ಪದಲ್ಲಿ. ಸೌಕಾರು ಭಾಂಡಿಗೆ ಪಾತ್ರೆ ಹಾಕುವ ಮೊದಲೇ ಹೋಗಿ ತಂದಿದ್ದ ತಂಗಳನ್ನ ಸಾರು ಹಾಕಿಕೊಟ್ಟ ಸಂಗವ್ವಕ್ಕನಿಗೆ ಒಳಗೊಳಗೇ ಒಂಚೂರು ಖುಷಿಯಾಗಿತ್ತು. ಮಗಳ ಬಗ್ಗೆ ಕಾಳಜಿ ಹುಟ್ಟಿದೆಯಲ್ಲ ಗಂಡನಿಗೆ ಎಂದು. ಶಾಂತಿಗಾಗಿ ಎತ್ತಿಟ್ಟಿದ್ದ ಅನ್ನ ಸಾಂಬಾರು ಕೂಡ ಸುರವಿ, ‘ಹಸದಿರ್ಬೇಕು ಉಣ್ಣು ರಾತ್ರಿನೂ ಏನೂ ತಿನದ ಉಪಾಸ ಬದ್ದಿದೀ’ ಎಂದು ಬಲು ಕಾಳಜಿಯಿಂದ ಉಣಬಡಿಸಿದಳು. ಬಕಾಸುರನಂತೆ ತಿಂದದ್ದಾಯಿತು ಹೊರನಡೆದ. ಇತ್ತ ಶಾಂತಿಯನ್ನ ಶಾಲೂ ಗೀಲೂ ಉಡಿಸಿ ತಯಾರು ಮಾಡಿದಳು ಸಂಗವ್ವಕ್ಕ. ಗೊಂಬೆಯಂತೆಯೇ ಕಂಗೊಳಿಸುತ್ತಿದ್ದಳು ಶಾಂತಿ. ಡಿಡಿ ಕನ್ನಡದಲ್ಲಿ ಆಗಾಗ ಪ್ರಸಾರಗೊಳ್ಳುತ್ತಿದ್ದ, ‘ಶಾನುಭೋಗರ ಮಗಳು ಹೆಸರು ಸೀತಾದೇವಿ.....ಹನ್ನೆರಡು ತುಂಬಿದರು ಮದುವೆಯಿಲ್ಲ,’ ‘ಹುಚ್ಚುಕೋಡಿ ಮನಸು..... ಯಾವ ಮದುವೆ ದಿಬ್ಬಣವೋ ಸುಮ್ಮನೆ ನಿಟ್ಟುಸಿರು’ ಮೊದಲಾದ ಭಾವಗೀತೆಗಳು ಶಾಂತಿಯ ಎದೆಯ ಮೇಲೆ ಸುಳಿದು ಕಚಗುಳಿ ಇಟ್ಟಂತಾಗಿ ತುಂಬಿದ ತುಟಿಯ ನೆರಳಲಿ ನಸುನಗೆಯ ಬಚ್ಚಿಡುತ್ತಿದ್ದಳು. ಅಂಬಾರಿಯೇರಿದ ರಾಜಕುಮಾರಿಯ ಎದೆಯಂತೆಯೇ ಇವಳ ಎದೆಯೂ ಢವಢವ ಸದ್ದು ಮಾಡುತ್ತ ಡೋಲಾಯಮಾನ ಸ್ಥಿತಿಯಲ್ಲಿತ್ತು. ಸುಮಾರು ಎರಡು ಗಂಟೆಯ ಹೊತ್ತಿಗೆ ದಲಾಲ ಮತ್ತು ಒಬ್ಬ ಮಧ್ಯವಯಸ್ಕನನ್ನು ಕರೆದುಕೊಂಡು ಸಂಗಪ್ಪ ಮನೆ ಮುಂದೆ ಬಂದು ನಿಂತ. ನೆಗ್ಗಿ ನೆಲ್ಲಿಕಾಯಿಯಂತಾಗಿದ್ದ ಚರಿಗೆಯಲ್ಲೇ ನೀರು ಕೊಟ್ಟ ಸಂಗವ್ವ ಪ್ಯಾಲಿ ನಗೆ ಬೀರುತ್ತ ತಲೆಯ ಮೇಲೆ ಸೆರಗು ಹೊದ್ದುಕೊಂಡು ಒಳನಡೆದಳು. ಶರಬತ್ತು ಕೊಟ್ಟ ನಂತರ ಮಣೆಯ ಮ್ಯಾಲೆ ಬಂದು ಕುಂತ ಶಾಂತಿ ನಾಚಿ ನೀರಾಗಿದ್ದಳು. ದಲಾಲ ಮಾತೆತ್ತಿದ ‘ನೋಡವಾ ತಂಗಿ ನಿಂಗ ಅಗದೀ ಭಾರಿ ವರಾ ತಂದೇನು, ಇಲ್ಲೇ ಲೋಕಲ್ ಅಲ್ಲಿದು. ‘ಗುಜರಾತ’ ಹೆಸರ ಕೇಳಿ ಇಲ್ಲೊ, ಏಳನೆತ್ತೆ ಸಾಲಿ ಕಲತಿಯಲಾ, ಕೇಳಿರ್ತಿ. ಅದು ನಿನ್ನ ಗಂಡನ ಮನಿ, ಅಗದೀ ರಾಣಿ ರಾಣಿಯಂಗ ನೋಡ್ಕೋತಾರ ನಿನ್ನ. ರಗಡ ಬೀಗತಾನಗೋಳ ಮಾಡಿಸೇನ ನಾ ಇಲ್ಲೇ ಸುತ್ತಮುತ್ತ ಹಳ್ಳ್ಯಾಗ’ ಅಂತಾ ತನ್ನ ಪರಿಚಯ ಮಾಡ್ಕೊಂತ ಮಾತನಾಡುತ್ತಿದ್ದ ಅಂವಾ. ಸಂಗವ್ವಕ್ಕನಿಗೆ ಸ್ವಲ್ಪ ಆತಂಕವೆನಿಸಿತು. ಈ ಥರದ ಗುಜ್ಜರಿಗೆ ಕೊಟ್ಟು ಮಾಡಿದ ಮದುವೆಯಂತ ಮದುವೆಗಳು ಸಾಕಷ್ಟು ಮುರಗಡೆ ಆಗಿದ್ದರ ಬಗ್ಗೆ, ಈಕಿ ಜೊತೆ ಕೂಲಿ ಬಂದವ್ರು ಮಾತಾಡೂದು ಕೇಳಿಸಿಕೊಂಡಿದ್ಳು. ಆದರೆ ಈ ಹೊತ್ತಿನ್ಯಾಗೆ ಏನೂ ಉಸಿರೊಡೆಯೊ ಧೈರ್ಯ ಅವಳಿಗಿರಲಿಲ್ಲ. ಇದ್ಯಾವುದರ ಬಗ್ಗೆಯೂ ಗ್ಯಾನವಿಲ್ಲದ ಶಾಂತಿ ವರನ ಕಡೆಗೆ ಕಳ್ಳನೋಟ ಬೀರಿದಾಗ ಅವನೂ ಮುಗುಳ್ನಕ್ಕ. ರೋಮಾಂಚನವ ತಡೆಯಲಾಗದೆ ಶಾಂತಿ ಮುಖ ಕೆಳಗೆ ಮಾಡಿದಳು. ಸುಂದರಿಯಾಗಿದ್ದ ಶಾಂತಿಯನ್ನು ಆ ಗುಜ್ಜರಂವ ಮೆಚ್ಚದೇ ಇರಲಿಲ್ಲ. ಮರುದಿನವೇ ಐವತ್ತು ಸಾವಿರಕ್ಕೆ ಹೆಸರೇ ಗೊತ್ತಿರದ ಊರಿಗೆ ವರನ ಹೆಸರೂ ಕೇಳದೆ ಶಾಂತಿಯನ್ನು ದಳಿದು ಕೈತೊದುಕೊಂಡದ್ದಾಯಿತು. ಸಂಗವ್ವಕ್ಕನೂ ಹೇಗೊ ಅವಳ ಮದುವೆಯೊಂದಾಯಿತು, ಇದ್ದಲ್ಲಿ ಅರಾಮಿರ್ಲಿ ಅಂತ ಹರಿಸಿ, ಸೆರಗಿನ ಚುಂಗಿನಿಂದ ಕಣ್ಣೀರು ಒರೆಸಿ ಕೊಂಡಳು.

ಮೊದಮೊದಲು ಭಾಷೆ ಗೊತ್ತಿಲ್ಲದಿದ್ದರೂ ಪ್ರೇಮದ ಭಾಷೆಯಲ್ಲಿಯೇ ಇಬ್ಬರೂ ರಸವತ್ತಾಗಿ ಜೀವಿಸಿದರು. ಅವನ ಹೆಸರು ಬೀಜು ಎಂಬುದು ಶಾಂತಿಗೆ